**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕ: 10-03-2025**

**ಪಾಟೀ ಸವಾಲು: 6 ಮತ್ತು 7ನೇ ಪ್ರತಿವಾದಿ ಪರ ಶ್ರೀಮತಿ. ಆರ್ ಎಮ್ ಎಚ್ ವಕೀಲರಿಂದ:**

1. ಮದುವೆಯಾದ ನಂತರ ನಾನು 5 ವರ್ಷಗಳ ವರೆಗೆ ರಾಮಚಂದ್ರ ಇವರ ಮನೆಯಲ್ಲಿ ವಾಸವಾಗಿದ್ದೆನು. ಮದುವೆಯಾದ 2 ವರ್ಷಗಳ ನಂತರ ವಾದಿ ನಂ.2 ಶೋಬಾ ಹುಟ್ಟಿರುತ್ತಾಳೆ. ವಾದಿ ನಂ.2 ಶೋಬಾ ಇವಳು ಹುಟ್ಟಿದಾಗಿನಿಂದ ನಾನು ತವರು ಮನೆಯಲ್ಲಿ ವಾಸವಾಗಿದ್ದೆನೆ. ನಾನು 8 ತಿಂಗಳು ಗರ್ಭಿಣಿ ಇರುವಾಗ ತವರು ಮನೆಗೆ ಹೋಗಿದ್ದೆನೆ. ರಾಮಚಂದ್ರ ಇವನು ನನ್ನ ಅತ್ತೆಯ ಮಗ. ನನಗೆ ಮತ್ತು ರಾಮಚಂದ್ರ ಇವರಿಗೆ ತಕರಾರು ಬಂದು ನಾನು ತವರು ಮನೆಯಲ್ಲಿ ಇದ್ದೆ ಎಂದರೆ ಸರಿ. ನಾನು ತವರು ಮನೆಯಲ್ಲೆ ಉಳಿದುಕೊಂಡಿದ್ದರಿಂದ ಕಾಶವ್ವಾ ಇವಳನ್ನು ರಾಮಚಂದ್ರ ಇವನು ಮದುವೆ ಮಾಡಿಕೊಂಡಿದ್ದನು ಎಂದರೆ ಸರಿ. ವಾದಿ ನಂ.2 ಶೋಬಾ ಇವಳು ನನ್ನ ಮಗಳು.

2. ಕಾಶವ್ವಾ ಇವಳಿಗೆ ಮೃತ ಮಂಜುಳಾ ಮತ್ತು ಪ್ರತಿವಾದಿ ನಂ.2 ಸುಶವ್ವಾ ಮತ್ತು ಪ್ರತಿವಾದಿ ನಂ.3 ಭಾರತಿ ಇವರು ರಾಮಚಂದ್ರನ ಮತ್ತು ಕಾಶವ್ವಾ ಇವರಿಗೆ ಜನಿಸಿರುತ್ತಾರೆ ಎಂದರೆ ಸರಿ. ಮೃತ ಮಂಜುಳಾ ಇವಳಿಗೆ ಪ್ರತಿವಾದಿ ನಂ.4-ಪ್ರಮೋದ ಮತ್ತು ಪ್ರತಿವಾದಿ ನಂ.5 ಪ್ರಥಮೇಶ ಮಕ್ಕಳು ಎಂದರೆ ಸರಿ. ಪ್ರತಿವಾದಿ ನಂ.1 ಕಾಶವ್ವಾ ಇವಳ ತಂಗಿ 6ನೇ ಪ್ರತಿವಾದಿ-ಬಸವ್ವಾ ಎಂದರೆ ಸರಿ. ಪ್ರತಿವಾದಿ ನಂ.1 ರವರ ಒಪ್ಪಿಗೆ ಪಡೆದು 6ನೇ ಪ್ರತಿವಾದಿ ಬಸವ್ವಾ ಇವಳನ್ನು ರಾಮಚಂದ್ರ ಮದುವೆ ಮಾಡಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಪ್ರತಿವಾದಿ ನಂ.6 ಬಸವ್ವಾ ಇವಳನ್ನು ರಾಮಚಂದ್ರನ 3ನೇ ಹೆಂಡತಿ ಎಂದು ತೋರಿದ್ದೆನೆ ಮತ್ತು ರಾಮಚಂದ್ರ ಇವನು ಬಸ್ಸವಾ ಇವಳನ್ನು ಮದುವೆಯಾಗಿದ್ದಾನೆ ಎಂದು ವಾದ ಪತ್ರದಲ್ಲಿ ಬರೆಯಿಸಿದ್ದೆನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ

ನಂ.7 ಇವಳ ನಿಜವಾದ ಹೆಸರು ಭೀಮವ್ವಾ ಇವಳಿಗೆ ಆಮೇಲೆ ದೀಪಾ ಎಂದು ಹೆಸರು ಇಟ್ಟಿದ್ದಾರೆ. ಪ್ರತಿವಾದಿ ನಂ.7 ಇವಳು ಬಸವ್ವಾ ಮತ್ತು ರಾಮಚಂದ್ರ ಇವರ ಮಗಳು ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಾನು ರಾಮಚಂದ್ರ ಮತ್ತು ಬಸವ್ವಾ ಇವರ ಮದುವೆ ಸಂಬಂದದಿಂದ ಪ್ರತಿವಾದಿ ನಂ.7 ಹುಟ್ಟಿದ್ದಾಳೆ ಎಂದು ಬರೆಯಿಸಿದ್ದೆನೆ ಎಂದರೆ ಸರಿಯಲ್ಲ. ಸಂಬಂಧವನ್ನು ಬರೆಯಿಸಿದ್ದರು ಕೂಡಾ ನಾನು ಈಗ ಬರೆಯಿಸಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

3. ರಾಮಚಂದ್ರನಿಗೆ ಚಿಕ್ಕಅಂಗ್ರೊಳ್ಳಿಯಲ್ಲಿ ಪಿತ್ರಾರ್ಜಿತ ಆಸ್ತಿ ಇತ್ತು ಎಂದು ತೋರಿಸಲು ಅದರ ಸರ್ವೆ ನಂಬರ ಹೇಳಲು ಬರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ದಾಖಲೆಗಳನ್ನು ಹಾಜರಪಡಿಸುತ್ತೇನೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಚಿಕ್ಕಅಂಗ್ರೊಳ್ಳಿಯಲ್ಲಿ ಪಿತ್ರಾರ್ಜಿತ ಆಸ್ತಿ ಇದ್ದ ಬಗ್ಗೆ ಬರೆಯಿಸಿರುತ್ತೇನೆ. ಚಿಕ್ಕಅಂಗ್ರೊಳ್ಳಿಯಲ್ಲಿ ಮನೆ ಇದ್ದಬಗ್ಗೆ ಅದರ ನಂಬರ ಹೇಳಲು ಬರುವುದಿಲ್ಲ ಏಕೆಂದರೆ ನಾನು ಶಾಲೆಯನ್ನು ಕಲಿತಿಲ್ಲ. ಮನೆ ಇತ್ತು ಎಂದು ತೋರಿಸಲು ಕಾಗದ ಪತ್ರವನ್ನು ಹಾಜರಮಾಡುತ್ತೇನೆ. ಚಿಕ್ಕಅಂಗ್ರೊಳಿಯಲ್ಲಿ ಮನೆ ಆಸ್ತಿ ಮತ್ತು ಜಮೀನು ಆಸ್ತಿ ಇದ್ದ ಬಗ್ಗೆ ಈ ದಾವೆಯಲ್ಲಿ ದಾವಾ ಆಸ್ತಿ ಎಂದು ತೋರಿಸಿದ್ದಿರಾ ಎಂದರೆ ಸಾಕ್ಷಿಯು ತೋರಿಸಿದ್ದೆನೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳನ್ನು ದಾವಾ ಆಸ್ತಿ ಎಂದು ಸೇರಿಸಿದ್ದೆನೆ. ಚಿಕ್ಕಅಂಗ್ರೂಳ್ಳಿಯಲ್ಲಿ ಇದ್ದ ಎಲ್ಲಾ ಮನೆ ಆಸ್ತಿ ಮತ್ತು ಜಮೀನು ಆಸ್ತಿಗಳನ್ನು ರಾಮಚಂದ್ರ ಇವನು ಮಾರಾಟ ಮಾಡಿರುತ್ತಾರೆ. ರಾಮಚಂದ್ರ ಇವನು ಗಂದಿಗವಾಡ ಊರಿನವರಿಗೆ ಮಾರಾಟ ಮಾಡಿರುತ್ತಾನೆ. ಆ ಸಮಯದಲ್ಲಿ ನನಗೆ ಅವರು ಹೇಳಿಲ್ಲ. ಎಷ್ಟು ಹಣಕ್ಕೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಾರಾಟ ಮಾಡಿದ ಬಗ್ಗೆ ಖರೀದಿ ಪತ್ರಗಳನ್ನು ನಾನು ನೋಡಿಲ್ಲ. ಚಿಕ್ಕಅಂಗ್ರೂಳ್ಳಿಯಲ್ಲಿ ಇರುವ ಎಲ್ಲಾ

ಆಸ್ತಿಗಳನ್ನು ಮಾರಾಟ ಮಾಡಿ, ಆ ಹಣದಿಂದ ದಾವಾ ಆಸ್ತಿಗಳನ್ನು ರಾಮಚಂದ್ರ ಇವನು ಖರೀದಿ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಖೇರವಾಡ ಗ್ರಾಮದ ಸರ್ವೆ ನಂ.106/ಎ ಜಮೀನನ್ನು ಎಷ್ಟನೆ ಇಸ್ವಿಯಲ್ಲಿ ಖರೀದಿ ಮಾಡಿದ್ದಾರೆ ಎಂದು ನನಗೆ ಇಸ್ವಿ ಹೇಳಲು ಬರುವುದಿಲ್ಲ. ಖರೀದಿ ಮಾಡಿದ ಬಗ್ಗೆ ದಾಖಲೆಯನ್ನು ಪಡೆದಿದ್ದೇನೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಕೊಟ್ಟಿಲ್ಲ. ಸರ್ವೆ ನಂ.106/ಎ ಇದು ಸರ್ಕಾರಿ ಪಡ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ತವರು ಮನೆಯಲ್ಲಿ ಉಳಿದ ನಂತರ ರಾಮಚಂದ್ರ ಇವನು ನನಗೆ ಜಮೀನು ಇಲ್ಲ ಎಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿದ್ದನು ಎಂದರೆ ಸರಿ. ದಾವಾ–ಎ ಶೆಡ್ಯೂಲ ಆಸ್ತಿ ಸರ್ವೆ ನಂ.106/ಎ ನೇದ್ದು ರಾಮಚಂದ್ರ ಇವರಿಗೆ ಸರ್ಕಾರದಿಂದ ಮಂಜೂರಿಯಾಗಿತ್ತು ಎಂದರೆ ಸರಿ. ರಾಮಚಂದ್ರ ಇವರು ಸ್ವತಃ ಒಕ್ಕಲುತನ ಮಾಡುತ್ತಿದ್ದರು ಎಂದರೆ ಸರಿ. ರಾಮಚಂದ್ರ ಇವನು ಜಮೀನಿನಲ್ಲಿ ಒಳ್ಳೆಯ ರೀತಿಯಿಂದ ದುಡಿಯುತ್ತಿದ್ದನು ಎಂದರೆ ಸರಿ. ಸದರಿ ದಾವಾ ಜಮೀನನ್ನು ಅವರೆ ಸಾಗುವಳಿ ಮಾಡಿ ಒಳ್ಳೆ ರೀತಿಯಿಂದ ಸಾಗುವಳಿ ಜಮೀನನ್ನಾಗಿ ಮಾಡಿದ್ದರು ಎಂದರೆ ಸರಿ. ಸದರಿ ಜಮೀನಿನ ಆದಾಯದಿಂದ ಮತ್ತು ಬ್ಯಾಂಕಿನಿಂದ ಸಾಲ ಪಡೆದು ಟ್ರಾಕ್ಟರ ಮತ್ತು ಟ್ರೇಲರ ಅಂದರೆ ಶೆಡ್ಯೂಲ್ ಬಿ ಆಸ್ತಿಯನ್ನು ರಾಮಚಂದ್ರ ಇವರು ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ದಾವಾ ಶೆಡ್ಯೂಲ್ –ಎ ಮತ್ತು ಬಿ ಆಸ್ತಿಗಳು ರಾಮಚಂದ್ರ ಇವರು ಜೀವಂತ ಇರುವರೆಗೂ ಅವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ರಾಮಚಂದ್ರ ಇವರು ಸಾಯುವರೆಗೂ ದಾವಾ ಆಸ್ತಿಗಳನ್ನು ತಮ್ಮ ಸ್ವಯಾರ್ಜಿತ ಆಸ್ತಿಗಳು ಎಂದು ಉಪಯೋಗ ಮಾಡುತ್ತಿದ್ದರು ಎಂದರೆ ಸರಿ. ದಾವಾ ಶೆಡ್ಯೂಲ –ಎ ಆಸ್ತಿಯಲ್ಲಿ ಪ್ರತಿವಾದಿ ನಂ.1 ಕಾಶವ್ವಾ ಇವಳು ರಾಮಚಂದ್ರ ಇವರೊಂದಿಗೆ ಸಾಗುವಳಿ ಮಾಡಲು ಸ್ವತಃ ದುಡಿದು

ಸಹಾಯ ಮಾಡುತ್ತಿದ್ದಳು ಎಂದರೆ ಸರಿ. ಪ್ರತಿವಾದಿ ನಂ.6 –ಬಸವ್ವಾ ಇವಳು ಸ್ವತಃ ದುಡಿದು ಸಹಾಯ ಮಾಡುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ರಾಮಚಂದ್ರ, 1ನೇ ಪ್ರತಿವಾದಿ–ಕಾಶವ್ವಾ ಮತ್ತು 6ನೇ ಪ್ರತಿವಾದಿ –ಬಸವ್ವಾ ಇವರೆಲ್ಲರು ದಾವಾ ಜಮೀನನ್ನು ಸಾಗುವಳಿ ಮಾಡುವ ರೀತಿಯಲ್ಲಿ ಅಭಿವೃದ್ಧಿ ಪಡಿಸಿದ್ದರು ಎಂದರೆ ಸಾಕ್ಷಿಯು 6ನೇ ಪ್ರತಿವಾದಿ–ಬಸವ್ವಾ ಇವಳು ಮಾಡಿಲ್ಲ ಎನ್ನುತ್ತಾರೆ. ದಾವಾ ಶೆಡ್ಯೂಲ–ಎ ಜಮೀನು ಆಸ್ತಿ ಸರ್ವೆ ನಂ.106/ಎ ನೇದ್ದರಲ್ಲಿ ರಾಮಚಂದ್ರ ಇವನು ಎರಡು ಮನೆಗಳನ್ನು ಕಟ್ಟಿದ್ದು, ಒಂದರಲ್ಲಿ ಪ್ರತಿವಾದಿ ನಂ.1 ಕಾಶವ್ವಾ ಮತ್ತು ಇನ್ನೊಂದರಲ್ಲಿ ಪ್ರತಿವಾದಿ ನಂ.6 ಬಸವ್ವಾ ಇವರು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಒಂದೇ ಮನೆ ಇದ್ದು ಅದರಲ್ಲಿ ಮಧ್ಯ ಗೋಡೆಯನ್ನು ಕಟ್ಟಿಕೊಂಡು ಭಾಗ ಮಾಡಿಕೊಂಡು ವಾಸ ಇದ್ದಾರೆ ಎನ್ನುತ್ತಾರೆ. ಮನೆಯನ್ನು ಕಟ್ಟುವಾಗಲೆ ಎರಡು ಭಾಗವನ್ನಾಗಿ ಮಾಡಿ ಕಟ್ಟಿದ್ದಾರೆ ಎಂದರೆ ಸರಿ. ಈಗ ಸಾಕ್ಷಿಗೆ ಮನೆ ಆಸ್ತಿಗೆ ಸಂಬಂಧಿಸಿದಂತೆ ಒಂದು ಭಾವ ಚಿತ್ರ ತೋರಿಸಿದ್ದು ಅದನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದ ಸಿಡಿಯನ್ನು ಹಾಜರಪಡಿಸಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ರಾಮಚಂದ್ರ ಇವನು ಜೀವಂತ ಇರುವಾಗ ಒಂದು ಮೃತ್ಯು ಪತ್ರವನ್ನು ಬರೆಯಿಸಿ ಅದನ್ನು ಉಪನೊಂದನಾಧಿಕಾರಿ ಕಚೇರಿಯಲ್ಲಿ ನೊಂದಾಯಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ –ಎ ಆಸ್ತಿ ಸರ್ವೆ ನಂ.106/ಎ ನೇದ್ದನ್ನು ಪ್ರತಿವಾದಿ ನಂ.1 ಕಾಶವ್ವಾ ಇವಳಿಗೆ ಮತ್ತು ಪ್ರತಿವಾದಿ ನಂ.6 ಬಸವ್ವಾ ಇವಳಿಗೆ ಮೃತ್ಯು ಪತ್ರದ ಮೂಲಕ ಹೋಗಬೇಕೆಂದು ರಾಮಚಂದ್ರ ಇವನು ಮೃತ್ಯು ಪತ್ರವನ್ನು ಬರೆಯಿಸಿ ಅದನ್ನು ಉಪನೊಂದನಾಧಿಕಾರಿ ಕಚೇರಿಯಲ್ಲಿ ನೊಂದಾಯಿಸಿದ್ದಾನೆ ಎಂದರೆ ಸಾಕ್ಷಿಯು ಅದು ನನಗೆ ಸಂಬಂಧಿಸಿಲ್ಲ ಮತ್ತು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ರಾಮಚಂದ್ರ ಇವನು ಸಾಯುವರೆಗೂ ಕಾಶವ್ವಾ ಇವಳೊಂದಿಗೆ ವಾಸ ವಾಗಿದ್ದನು. ರಾಮಚಂದ್ರ ಇವನು ಗಂಟಲು ಕ್ಯಾನ್ಸರ ಆಗಿ ಮರಣ

ಹೊಂದಿರುತ್ತಾನೆ. ಸಾಯುವರೆಗೂ ರಾಮಚಂದ್ರ ಇವನಿಗೆ ಮಾತನಾಡಲು ಮತ್ತು ಓಡಾಡಲು ಬರುತ್ತಿತ್ತು. ಸಾಕ್ಷಿ ಮುಂದುವರೆದು ಸಾಯುವುದಕ್ಕಿಂತ ಮುಂಚೆ 8 ದಿನಗಳವರೆಗೆ ಹಾಸಿಗೆ ಹಿಡಿದಿದ್ದನ್ನು ಎನ್ನುತ್ತಾರೆ. ರಾಮಚಂದ್ರ ಇವನು ಮೃತ್ಯು ಪತ್ರದ ಮೂಲಕ ದಾವಾ–ಎ ಶೆಡ್ಯೂಲ ಆಸ್ತಿಯನ್ನು 1ನೇ ಪ್ರತಿವಾದಿ ಮತ್ತು 6ನೇ ಪ್ರತಿವಾದಿ ಇವರಿಗೆ ಬಿಟ್ಟುಕೊಟ್ಟಿದ್ದರಿಂದ ನನಗೆ ಸದರಿ ದಾವಾ ಜಮೀನಿನಲ್ಲಿ ನನಗೆ ಮತ್ತು ವಾದಿ ನಂ.2 ಇವಳಿಗೆ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರದ ಆಧಾರದ ಮೇಲೆ ದಾವಾ ಜಮೀನಿನಲ್ಲಿ ತಮ್ಮ ಹೆಸರುಗಳನ್ನು ದಾಖಲು ಮಾಡಬೇಕೆಂದು ಪ್ರತಿವಾದಿ ನಂ.1 ಮತ್ತು 6 ಇವರು ಅರ್ಜಿಯನ್ನು ಸಲ್ಲಿಸಿದಾಗ ನಾವು ಅದಕ್ಕೆ ತಕರಾರು ಮಾಡಿರುತ್ತೇವೆ. ಸದರಿ ಪ್ರಕರಣ ತಹಶೀಲ್ದಾರ ಕಚೇರಿಯಲ್ಲಿ ನಡೆದಿತ್ತು ಎಂದರೆ ಸರಿ. ಸದರಿ ಕಂದಾಯ ಇಲಾಖೆಯಲ್ಲಿ ನ್ಯಾಯಾಲಯದಿಂದ ಆದೇಶ ಪಡೆಯಬೇಕೆಂದು ತೀರ್ಮಾನ ಮಾಡಲಾಗಿತ್ತು ಎಂದರೆ ಸರಿ. ಆ ನಂತರ ನಾನು ಪ್ರಸ್ತುತ ದಾವೆಯನ್ನು ದಾಖಲು ಮಾಡಿದ್ದೆನೆ ಎಂದರೆ ಸರಿ. ತಹಶೀಲ್ದಾರ ಕಚೇರಿಯಲ್ಲಿ ಪ್ರಕರಣ ನಡೆದಾಗ ಮತ್ತು ತಹಶೀಲ್ದಾರಗೆ ಅರ್ಜಿಕೊಟ್ಟಾಗ ಮೃತ್ಯು ಪತ್ರದ ಬಗ್ಗೆ ಗೊತ್ತಿದ್ದರು ಕೂಡಾ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ತಾರಿಹಾಳದ ಮಗಳ ಮನೆಯಲ್ಲಿ ವಾಸವಾಗಿದ್ದೆನೆ. ನನ್ನ ತವರು ಮನೆಯು ಕೂಡಾ ತಾರಿಹಾಳದಲ್ಲಿ ಇದೆ. ದಾವಾ ಜಮೀನಿನಲ್ಲಿ 1ನೇ ಪ್ರತಿವಾದಿ ಮತ್ತು 6ನೇ ಪ್ರತಿವಾದಿಯವರು ಸಾಗುವಳಿ ಮಾಡಿಕೊಂಡು ದಾವಾ ಜಮೀನಿನಲ್ಲಿ ಇರುವ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಜಮೀನಿನ ಉತ್ಪನ್ನಗಳನ್ನು 1ನೇ ಮತ್ತು 6ನೇ ಪ್ರತಿವಾದಿಯವರೆ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿ. ದಾವಾ ಜಮೀನಿನ ಕಬ್ಜಾ ವಹಿವಾಟಿಯಲ್ಲಿ 1ನೇ ಪ್ರತಿವಾದಿ ಮತ್ತು 6ನೇ ಪ್ರತಿವಾದಿಯವರೆ ಇದ್ದಾರೆ ಎಂದರೆ ಸರಿ. ನಮಗೆ ದಾವಾ ಜಮೀನಿನಲ್ಲಿ ಯಾವುದೇ ರೀತಿಯಿಂದ ಹಕ್ಕು ವ ಹಿತಾಸಕ್ತಿ ಇಲ್ಲದಿದ್ದರೂ ಕೂಡಾ ಈ ಸುಳ್ಳು

ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ –ಬಿ ಶೆಡ್ಯೂಲ ಆಸ್ತಿ ಟ್ರಾಕ್ಟರ ಇದು 3ನೇ ಪ್ರತಿವಾದಿಯ ಗಂಡ ಉಪಯೋಗ ಮಾಡುತ್ತಿದ್ದಾನೆ.

**ಮರವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**